## ಪ್ರಧಾನ  ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ
## ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 1966 / 2023

**ಚಾಸಾ :- 07  / ಪ್ರಾಸಾ :- 04**

| | |
|---|---|
| ಹೆಸರು | **ಡಾ:: ಜ್ಞಾನಪ್ರಕಾಶ್** |
| ತಂದೆಯ  ಹೆಸರು | **ಎಸ್ ಆರ್ ನಾರಾಯಣ್ ?** |
| ವಯಸ್ಸು | **54 ವರ್ಷ** |
| ಉದ್ಯೋಗ | **ವೈದ್ಯಾಧಿಕಾರಿಗಳು, ಮಾಗಡಿ ಸರ್ಕಾರಿ  ಆಸ್ಪತ್ರೆ** |
| ವಿಳಾಸ | **ಮಾಗಡಿ** |

**ದಿನಾಂಕ: 04.07.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

18-07-2010 ರಿಂದ ಇಲ್ಲಿಯವರೆಗೂ  ಮಾಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ  ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ: 14.02.2023 ರಂದು ಸುಮಾರು ರಾತ್ರಿ 8.50 ರ ಸಮಯಕ್ಕೆ ಮಾಳಿಗಪ್ಪ (ಚಾಸಾ-2)ಎಂಬುವವರು  ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ತಾವೆ ಸ್ವತಃ ಬಂದಿದ್ದು, ಸದರಿಯವರನ್ನು ವೈದ್ಯಕೀಯ  ತಪಾಸಣೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಸದರಿಯ 1. ಅವರ ಎದೆಯ ಎರಡೂ ಬದಿಯಲ್ಲಿ ನೋವಿನಿಂದ ಕೂಡಿದ ಗಾಯ ಕಂಡು ಬಂದಿರುತ್ತದೆ. 2. ಅವರ ಬಲತೊಡೆಯ ಕೆಳಭಾಗದಲ್ಲಿ ನೋವು ಇರುತ್ತದೆ. ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯಗಳು ಸಾಮಾನ್ಯ  ಸ್ವರೂಪದ ಗಾಯಗಳಾಗಿರುತ್ತವೆ.  ಸದರಿ ಮೇಲೆ ಹೇಳಿದ  ಗಾಯಗಳು ಕೈಯಿಂದ ಹಾಗೂ ಹೆಲ್ಮೆಟ್ ?ನಿಂದ ಹೊಡೆದರೆ ಆಗುವ ಸಂಭವ ಇರುತ್ತದೆ.  ಈಗ ಸಾಕ್ಷಿಗೆ ಗಾಯದ ಪ್ರಮಾಣಪತ್ರವನ್ನು

ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಗಾಯದ ಪ್ರಮಾಣಪತ್ರವನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ- ಶ್ರೀ. ವಿ ಎಲ್ ಎನ್ . ವಕೀಲರಿಂದ ಆರೋಪಿಗಳ** ಪರವಾಗಿ ಃ-

ಗಾಯದ ಪ್ರಮಾಣಪತ್ರದಲ್ಲಿ ಘಟನೆಯು ಎಲ್ಲಿ ಜರುಗಿರುತ್ತದೆ ಎಂದು ಬರೆದಿರುತ್ತೀರಾ ಎಂದರೆ ಸಾಕ್ಷಿ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ವ್ಯಕ್ತಿಯು ಹಲ್ಲೆ ಮಾಡಿರುತ್ತಾರೆ ಎಂದು ಬರೆದಿರುತ್ತೀರಾ ಎಂದರೆ ಸಾಕ್ಷಿ ಹೌದು ನಾರಾಯಣಿ ಎಂದು ನಮೂದಿಸಿರುತ್ತೇನೆಂದು ನುಡಿಯುತ್ತಾರೆ. ನಿಪಿ-4 ರಗಾಯದ ಪ್ರಮಾಣಪತ್ರದಲ್ಲಿ ನಮೂದಿಸಿರುವ ಗಾಯದ ಸ್ವರೂಪಗಳು ಗಟ್ಟಿಯಾದ ವಸ್ತುವಿನ ಮೇಲೆ ಬಿದ್ದರೆ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪಿರ್ಯಾದದಾರರಿಗೆ ಸಹಾಯ ಮಾಡದೇಕೆಂಬ ಉದ್ದೇಶದಿಂದ ಗಾಯದ ಪ್ರಮಾಣಪತ್ರವನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುುತ್ತಾರೆ. ಗಾಯಾಳುವಿಗೆ ಯಾವುದೇ ಗಾಯಗಳು ಆಗಿದ್ದಿರಲಿಲ್ಲ , ಸುಳ್ಳು ಗಾಯದ ಪ್ರಮಾಣಪತ್ರವನ್ನು ಸೃಷ್ಟಿಸಿರುತ್ತೀರಿ ಹಾಗೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಹೆಲ್ಮೆಟ್ ?ಅನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**

# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.
# ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 1966 /2023

**ಚಾಸಾ :- 05 / ಪ್ರಾಸಾ :- 06**

| | |
|---|---|
| ಹೆಸರು | ಹನುಮೇಗೌಡ |
| ತಂದೆ ಹೆಸರು | ದೊಡ್ಡನರಸಿಂಹಯ್ಯ |
| ವಯಸ್ಸು | 59 |
| ಉದ್ಯೋಗ | ವ್ಯವಸಾಯ |
| ವಿಳಾಸ | ಗವಿನಾಗಮಂಗಲ |

**ದಿನಾಂಕ: 04.07.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿನಾಂಕ 14.02.2023 ರಂದು ರಾತ್ರಿ 9.15 ಗಂಟೆ ಸಮಯದಲ್ಲಿ ನಾನು ಮತ್ತು ನಮ್ಮ ಗ್ರಾಮದ ರಾಮೇಗೌಡ ಇಬ್ಬರೂ ಮಾಗಡಿಯಿಂದ ನಮ್ಮ ಗ್ರಾಮಕ್ಕೆ ಹೋಗುತ್ತಿದ್ದೆವು ಎಂದರೆ ಸರಿಯಲ್ಲ. ಮಾಗಡಿ ಬೆಂಗಳೂರು ಮುಖ್ಯ ರಸ್ತೆಯಲ್ಲಿ ಇರುವ ಜಯಂತ್ ಇಂಜನಿಯರಿಂಗ್ ವರ್ಕ್ ಶಾಪ್ ಮಂಬಾಗದಲ್ಲಿ ಹೋಗುತ್ತಿರುವಾಗ ನಮ್ಮ ಗ್ರಾಮದ ನರಸೇಗೌಡ ಮತ್ತು ನಂಜುಂಡಯ್ಯ ಇಬ್ಬರೂ ಗಲಾಟೆ ಮಾಡಿಕೊಳ್ಳುತ್ತಿದ್ದರು ಹಾಗೂ ಮಾಶಿತಿಗೆ

ಮಾತು ಬೆಳೆದು ನರಸೇಗೌಡ ನಂಜುಂಡಯ್ಯನಿಗೆ ಕೈಯಿಂದ ಹೊಡೆದನು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆಗ ಚಾಸಾ- 2 ರವರು ಬಿಡಿಸಲು ಹೋದಾಗ ನರಸೇಗೌಡ ನಂಜುಂಡನ ಕೈಯಲ್ಲಿ ಇದ್ದ ಹೆಲ್ಮೆಟ್ ನಿಂದ ಮಾಳಗಪ್ಪನ ತಲೆಗೆ ಹೊಡೆದು ಅವಾಚ್ಯ ಶಬ್ದಗಳಿಂದ ಬೈಯ್ದು ಪ್ರಾಣ ಬೆದರಿಕೆ ಹಾಕಿ ಹೊರಟು ಹೋದನು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ಎಲ್ಲಾ ಮಾತಿಹಿ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ- ಶ್ರೀ. ವಿ ಎಲ್ ಎನ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಆರೋಪಿ ಪರ ವಕೀಲರು ಪಾಟೀಸವಾಲುಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**